MMR MEDIA Since 1975

# MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - SATURDAY 13-5-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

### ವರ್ಷದ ಪ್ರಥಮಾರ್ಧದಲ್ಲಿ ಭಾರತದ ಸಸ್ಯಜನ್ಯ ಎಣ್ಣೆ ಆಮದು 21 ಶೇಕಡಾ ಹೆಚ್ಚಳ

ವರ್ಷಾರಂಭದ 6 ತಿಂಗಳಲ್ಲಿ ಭಾರತದ ಸಸ್ಯಜನ್ಯ ತೈಲ ಆಮದು 21 ಶೇಕಡಾ ಹೆಚ್ಚಳವಾಗಿ 81.10 ಲಕ್ಷ ಟನ್‌ಗಳಗಿವೆಯೆಂದ ಸಾಲ್ವೆಂಟ್ಸ್ ಎಕ್ಸ್‌ಟ್ರಾಕ್ಟರ್ಸ್ ಅಸೋಸಿಯೇಶನ್ ಪ್ರಕಟಿಸಿದೆ. ಪಾಮೆಣ್ಣೆ ಆಮದು ಈ ಅವಧಿಯಲ್ಲಿ 49 ಶೇಕಡಾದಿಂದ 61 ಶೇಕಡಾಕ್ಕೆ ಹೆಚ್ಚಳವಾಗಿದೆ. ರಿಫೈಂಡ್ ಪಾಮೆಣ್ಣೆ ಆಮದು 22 ಶೇಕಡಾ ಹೆಚ್ಚಳದೊಂದಿಗೆ 11.01 ಲಕ್ಷ ಟನ್‌ಗಳಾಗಿವೆ. ರಿಫೈಂಡ್ ಪಾಮೆಣ್ಣೆ ಆಮದು ಹೆಚ್ಚಳದಿಂದ ಭಾರತೀಯ ರಿಫೈನರಿಗಳು ಪೂರ್ಣ ಸಾಮರ್ಥ್ಯದಲ್ಲಿ ಕಾರ್ಯಾಚರಿಸಿದಂತಾಗಿದೆಯೆನ್ನಲಾಗಿದೆ. ಕಚ್ಚಾ ಪಾಮೆಣ್ಣೆ ಹಾಗೂ ರಿಫೈಂಡ್ ಪಾಮೆಣ್ಣೆಯ ಆಮದು ತೆರಿಗೆ ವ್ಯತ್ಯಾಸ ಹೆಚ್ಚಳಗೊಳಿಸಿ ರಿಫೈಂಡ್ ಪಾಮೆಣ್ಣೆಯ ಆಮದು ತೆರಿಗೆ ವ್ಯತ್ಯಾಸ ಹೆಚ್ಚಳಗೊಳಿಸಿ ರಿಫೈಂಡ್ ಪಾಮೆಣ್ಣೆಗೆ ಈಗಿರುವ 7.5 ಶೇಕಡಾ ತೆರಿಗೆಯನ್ನು 15 ಶೇಕಡಾ ಕ್ಕೆ ಹೆಚ್ಚಳ ಮಾಡಬೇಕೆಂದು SEA ಹೇಳಿದೆ. ಮೇ ಯಿಂದ ಸೆಪ್ಟೆಂಬರ್ ಅವಧಿಯಲ್ಲಿ ಮಲೇಶಿಯಾದ ಕಚ್ಚಾ ಪಾಮೆಣ್ಣೆ ಉತ್ಪಾದನೆ ಹೆಚ್ಚಳವಾಗಬಹುದೆನ್ನಲಾಗಿದೆ.

### ಗೋಧಿ ಸರಾಸರಿ ಏಜೆನ್ಸಿಗಳಿಂದ ಖರೀದಿ 2.7 ಮಿಲಿಯನ್ ಟನ್‌ಗಳಾಗುವ ಸಾಧ್ಯತೆ

ನಿಗದಿತ ಅಂದಾಜು 34.15 ಮಿಲಿಯನ್ ಟನ್‌ಗಳಿಂದ ಕಡಿಮೆಯಾಗಿ ಸರಕಾರಿ ಏಜೆನ್ಸಿಗಳ ಗೋಧಿ ಖರೀದಿ ಈ ವರ್ಷ 27 ಮಿಲಿಯನ್ ಟನ್ ಗಳಾಗಬಹುದೆನ್ನಲಾಗಿದ್ದು, ಇದು ಕನಿಷ್ಠ ಅವಶ್ಯಕತೆಯಾದ 18.5 ಮಿಲಿಯನ್ ಟನ್ ಗಳಿಂದ ಬಹಳ ಅಧಿಕವೆನ್ನಲಾಗಿದೆ. ಇದುವರೆಗಿನ ಖರೀದಿ 25.41 ಮಿಲಿಯನ್ ಟನ್ ಗಳಾಗಿವೆಯೆನ್ನಲಾಗಿದೆ.

### 2022–23 ರಲ್ಲಿ ರೂ.12 ಸಾವಿರ ಕೋಟಿ ಅಂಕ ಮೌಲ್ಯದ ಬಾಸ್ಮತಿ ಅಕ್ಕಿ ರಫ್ತು

2022–23 ರಲ್ಲಿ ಭಾರತದಿಂದ ರೂ. 38524 ($ 4.79 ಬಿಲಿಯನ್) ಮೌಲ್ಯದ ಬಾಸ್ಮತಿ ಅಕ್ಕಿ ರಫ್ತು ಆಗಿದ್ದು, ಹಿಂದಿನ ವರ್ಷಕ್ಕಿಂತ ರೂ.12109 ಕೋಟಿ ಅಧಿಕ ಮೌಲ್ಯದ್ದಾಗಿದೆಯೆನ್ನಲಾಗಿದೆ.

### ಬೇಳೆಕಾಳು ಅಧಿಕ ಬೇಡಿಕೆ

ಉದ್ದು, ತೊಗರಿ, ಮಸೂರ್ ಹಾಗೂ ಕಡ್ಲೆಗಳಿಗೆ ಬೇಡಿಕೆ ಅಧಿಕವಾಗುತ್ತಿದ್ದು ದರ ಹೆಚ್ಚಳ ಕಂಡಿದೆಯೆನ್ನಲಾಗಿದೆ. ಉದ್ದು, ತೊಗರಿ ಆಮದು ಮ್ಯಾನ್ಮಾರ್‌ನಿಂದ ಹೆಚ್ಚಳಗೊಳಿಸಲು ವ್ಯಾಪಾರಿಗಳಿಗೆ ಸೂಚಿಸಲಾಗಿದೆಯೆನ್ನಲಾಗಿದೆ. ದಾಸ್ತಾನುದಾರರಲ್ಲಿರುವ ದಾಸ್ತಾನು ಮೇಲೆ ನಿಗಾವಿಡಲಾಗುತ್ತಿದ್ದು, ಪರಿಸ್ಥಿತಿಯ ಲಾಭಕ್ಕಾಗಿ ದಾಸ್ತಾನು ಹಿಡಿದಿಡರೆ ಮಾರುಕಟ್ಟೆಗೆ ಬಿಡುಗಡೆಗೊಳಿಸಲು ಸೂಚಿಸಲಾಗಿದೆಯೆನ್ನಲಾಗಿದೆ.